O.S. No.353/2023
PW.2

ಇಂದು ದಿನಾಂಕ: 18-06-2025 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ಪಾಟಿ ಸವಾಲು: ಪ್ರತಿವಾದಿ ಪರ ಶ್ರೀ. ಎಂ.ಕೆ.ಟಿ. ವಕೀಲರಿಂದ :

ನನ್ನ ತಾಯಿಯ ಮದುವೆ ಎಷ್ಟು ವರ್ಷಗಳ ಹಿಂದೆ ಆಗಿದೆ ಎಂಬುದು ನನಗೆ ನಿಖರವಾಗಿ ಗೊತ್ತಿಲ್ಲ. ನನ್ನ ತಾಯಿಯ ವಯಸ್ಸು ಈಗ 70 ವರ್ಷ. ನನ್ನ ತಾಯಿಯ ತಂದೆ ತಿಮ್ಮಣ್ಣ ಸತ್ತು 23 ವರ್ಷಗಳಾಗಿವೆ. ನನ್ನ ತಾಯಿಯ ತಾಯಿ ತೀರಿಕೊಂಡು 22 ವರ್ಷಗಳಾಗಿವೆ. ನನ್ನ ತಂದೆ ತಾಯಿ ಮದುವೆಯಾದಾಗ ನನ್ನ ತಂದೆ ಕವಿತಾಳದಲ್ಲಿದ್ದರು. ಮದುವೆಯಾದ ಮೇಲೆ ನನ್ನ ತಾಯಿ ಮತ್ತು ತಂದೆ ಕೆಲವು ದಿನ ನಕ್ಕುಂದಿ ಗ್ರಾಮದಲ್ಲಿದ್ದರು, ನಂತರ ಕವಿತಾಳಕ್ಕೆ ಬಂದಿದ್ದರು. ನನ್ನ ತಾಯಿ ಅಂದಾಜು 20 ರಿಂದ 30 ವರ್ಷಗಳಿಂದ ಕವಿತಾಳದಲ್ಲಿ ವಾಸ ಮಾಡುತ್ತಿದ್ದಾರೆ. ದಾವಾ ಆಸ್ತಿಯ ಚಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ, ಸರ್ವೆ ನಂಬರ್ ನನಗೆ ಗೊತ್ತು. ದಾವಾ ಆಸ್ತಿಗಳು ನಮ್ಮ ಮುತ್ತಾತ ಹಂಪಯ್ಯನಿಂದ ಬಂದಿವೆ. ಸರ್ವೆ ನಂ.156 ನನ್ನ ತಾಯಿಯ ಅಣ್ಣ ಮಲ್ಲಪ್ಪನಿಗೆ ಸರಕಾರದಿಂದ ತಳವಾರಿಕೆ ಇನಾಮು ಬಂದಿದೆ. ಉಳಿದ ಆಸ್ತಿಗಳು ನಮ್ಮ ತಾತ ತಿಮ್ಮಣ್ಣನಿಗೆ ಬಂದಿವೆ. ನನ್ನ ತಾಯಿಯ ಕುಟುಂಬಕ್ಕೆ ಸಂಬಂಧಪಟ್ಟ 2 ಮನೆಗಳು ಮಾನವಿಯ ತಾಲೂಕಿನ ನಕ್ಕುಂದಿ ಗ್ರಾಮದಲ್ಲಿವೆ. ಸದರಿ 2 ಮನೆಗಳಲ್ಲಿ ಒಂದು ಹಳೆ ಮನೆ ಇದೆ ಅದರಲ್ಲಿ ಒಬ್ಬ ಹುಸೇನಪ್ಪ ಎಂಬುವವರು ವಾಸ ಮಾಡುತ್ತಾರೆ ಎಂದರೆ ಸಾಕ್ಷಿದಾರರು ಹುಸೇನಪ್ಪನ ಮಕ್ಕಳು ವಾಸ ಮಾಡುತ್ತಾರೆ ಎನ್ನುತ್ತಾರೆ. 20 ವರ್ಷಗಳ ಹಿಂದೆ 1 ರಿಂದ 6 ನೇ ಪ್ರತಿವಾದಿಯರು ನಕ್ಕುಂದಿ ಗ್ರಾಮದಲ್ಲಿ ಒಂದು ಮನೆ ಕಟ್ಟಿಸಿದ್ದಾರೆ ಎಂದರೆ ಸರಿ. ನಮ್ಮ ತಾಯಿಗೆ ನಾವು 6 ಜನ ಮಕ್ಕಳಿದ್ದೇವೆ.

ನಮ್ಮ ತಂದೆಯ  ಆಸ್ತಿ ಸಾಕಷ್ಟು ಇದೆ ಎಂದರೆ ಸರಿ. 1 ನೇ ಪ್ರತಿವಾದಿಗೆ ಗಂಡನ ಮನೆಯಲ್ಲಿ ಆಸ್ತಿ ಇಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಗಂಡನ ಮನೆಯ ಆಸ್ತಿಯ ಸರ್ವೆ ನಂಬರ್ ಗೊತ್ತಿಲ್ಲ.

ಸರ್ವೆ ನಂಬರ್ 156 ರ ಜಮೀನಿನಲ್ಲಿ 1 ನೇ ಪ್ರತಿವಾದಿ ಪಿ.ಕೆಜಿ.ಬಿ. ಬ್ಯಾಗವಾಟ್ ದಲ್ಲಿ ಸಾಲ ಪಡೆದಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ಸಾಲ ಪಡೆದ ವಿಷಯ ನನ್ನ ತಾಯಿಗೆ ಗೊತ್ತಿದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಅವರ ದೊಡ್ಡಪ್ಪನ ಮಗ, ಹನುಮಂತ ತಂದೆ ಭೀಮಯ್ಯ ಎನ್ನುವವರು ಅರಿಷಿಣ ಕುಂಕುಮದ ಉದ್ದೇಶಕ್ಕೆ ದಾವಾ ಐಟಂ ನಂ.3 ರಲ್ಲಿ 1 ಎಕರೆ 35 ಗುಂಟೆ ಜಮೀನು ಕೊಟ್ಟಿದ್ದಾರೆ ಎಂದರೆ ಸರಿ.

1996 ರಲ್ಲಿ 1 ನೇ ಪ್ರತಿವಾದಿಯ ಹೆಸರಿನಲ್ಲಿ ದಾವಾ ಐಟಂ ನಂ.3 ಮುಟೇಷನ್ ಆಗಿದೆ ಎಂದರೆ ಗೊತ್ತಿಲ್ಲ. 1996 ರಿಂದ 1 ನೇ ಪ್ರತಿವಾದಿ ದಾವಾ ಐಟಂ ನಂ.3 ರ ಸ್ವಾಧೀನತೆಯಲ್ಲಿದ್ದಾರೆ ಎಂದರೆ ಸರಿಯಲ್ಲ. ನಮ್ಮ ತಾಯಿಯ ತಂದೆ ಸಾಯುವುದಕ್ಕಿಂತ ಮೊದಲು 2 ನೇ ಪ್ರತಿವಾದಿ ರಾಮಣ್ಣ ಜನಿಸಿದ್ದ ಎಂದರೆ ಸರಿ. ನಮ್ಮ ತಾಯಿಯ ತಂದೆ ತಾಯಿ ಸತ್ತ ಮೇಲೆ ಅವರ ಆಸ್ತಿಗಳನ್ನು 1 ನೇ ಪ್ರತಿವಾದಿ ಮಾತ್ರ ಕಬ್ಜಾ ವಹಿವಾಟಿನಲ್ಲಿದ್ದಳು ಎಂದರೆ ನಮ್ಮ ತಾಯಿ ಕೂಡ ಕಬ್ಜಾ ವಹಿವಾಟಿಯಲ್ಲಿದ್ದಾರೆ. ನಕ್ಕುಂದಿ ಗ್ರಾಮದ ಓಲೆಕಾರಿಕೆಯನ್ನು 1 ನೇ ಪ್ರತಿವಾದಿ ಮತ್ತು ಶರಣಪ್ಪ ತಂದೆ ಬಂಡೆಪ್ಪ ತಲಾ ಒಂದು ವರ್ಷ ಮಾಡುತ್ತಿದ್ದರು. 1 ರಿಂದ 6 ನೇ ಪ್ರತಿವಾದಿಯರು ದಾವಾ ಆಸ್ತಿಯಲ್ಲಿ ನಿಮ್ಮ ತಾಯಿಗೆ ಪಾಲು ಕೊಡದೆ ಅವರೇ ಅನುಭವಿಸುತ್ತಿದ್ದಾರೆ ಎಂದರೆ ಸಾಕ್ಷಿದಾರರು ಕಳೆದ 5-6 ವರ್ಷಗಳಿಂದ ಪಾಲು ಕೊಡುತ್ತಿಲ್ಲ ಎನ್ನುತ್ತಾರೆ.

2001 ರಿಂದಲೇ ದಾವಾ ಐಟಂ ನಂ.1 ಸರ್ವೆ ನಂ.7 ರ ಆಸ್ತಿ 1 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ದಾವಾ ಐಟಂ ನಂ. 2 ಈಗ 1 ನೇ ಪ್ರತಿವಾದಿಯ ಹೆಸರಿನಲ್ಲಿದೆ

ಎಂದರೆ ಸರಿಯಲ್ಲ. ದಾವಾ ಐಟಂ ನಂ.3 ಮೊದಲು 1 ನೇ ಪ್ರತಿವಾದಿಯ ಹೆಸರಿನಲ್ಲಿತ್ತು ಈಗ ಆಕೆಯ ಮಕ್ಕಳ ಹೆಸರಿನಲ್ಲಾಗಿದೆ ಎಂದರೆ ಸರಿಯಲ್ಲ ಒಳಗಿಂದೊಳಗೆ ನಮಗೆ ಗೊತ್ತಿಲ್ಲದೆ ಮಾಡಿಸಿಕೊಂಡಿದ್ದಾರೆ. ದಾವಾ ಸರ್ವೆ ನಂ.7 ರಲ್ಲಿ 2 ಎಕರೆ ಮಾರಾಟ ಆಗಿದೆ ಎಂದರೆ ಸರಿ. ಸದರಿ ಮಾರಾಟದ ಜಮೀನು ಈಗ 7 ನೇ ಪ್ರತಿವಾದಿಯ ಸ್ವಾಧೀನತೆಯಲ್ಲಿದೆ ಎಂದರೆ ಸರಿ. 7 ನೇ ಪ್ರತಿವಾದಿ ಈಗ 2 ವರ್ಷಗಳ ಹಿಂದೆ ಖರೀದಿ ಮಾಡಿದ ಆಸ್ತಿ ಕಬ್ಜೆಯಲ್ಲಿ ತೆಗೆದುಕೊಂಡಿದ್ದಾರೆ. ನಮ್ಮ ತಾಯಿ ಅವರ ತಂದೆ ತಾಯಿಗೆ ಪಾಲು ಬೇಕು ಎಂದು ಕೇಳಿದ್ದಾಗ, ಅವರು ಪಾಲು ಕೊಡುತ್ತೇವೆ ಎಂದು ಹೇಳಿದ್ದರು. ನಮ್ಮ ತಾಯಿಯ ಮದುವೆಯಾದಾಗಿನಿಂದ ನಮ್ಮ ತಾಯಿಗೆ 1 ರಿಂದ 6 ನೇ ಪ್ರತಿವಾದಿಯರು ದಾವಾ ಆಸ್ತಿಯ ಯಾವ ಲೆಕ್ಕ ಪತ್ರ ಕೊಟ್ಟಿಲ್ಲ ಪಾಲು ಕೊಟ್ಟಿಲ್ಲ ಎಂದರೆ ಕೊಡುತ್ತೇವೆ ಎಂದು ಹೇಳಿದ್ದರು ಮತ್ತು ಮೊದಲು ಲೆಕ್ಕಪತ್ರ ಕೊಟ್ಟಿದ್ದರು ಆದರೆ ಈಗ ಕೊಟ್ಟಿಲ್ಲ ನಮ್ಮ ತಾಯಿಗೆ ಲೆಕ್ಕ ಪತ್ರ ಕೊಟ್ಟ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಸಲ್ಲಿಸಿಲ್ಲ ಎಂದರೆ ಸರಿ. ವಾದ ಪತ್ರದಲ್ಲಿ ಸದರಿ ಲೆಕ್ಕ ಕೊಟ್ಟ ಬಗ್ಗೆ ಬರೆಸಿಲ್ಲ ಎಂದರೆ ಸರಿ. ಲೆಕ್ಕ ಕೊಡದೆ ಇರುವುದರಿಂದ ಬರೆಸಿಲ್ಲ ಎಂದರೆ ಸರಿಯಲ್ಲ. ಹಂಪಯ್ಯ ಸತ್ತ ಮೇಲೆ ಹುಸೇನಪ್ಪ ಮತ್ತು ಪಕೀರಪ್ಪರವರಿಗೆ ನಿಖರವಾಗಿ ಯಾವ ಯಾವ ಆಸ್ತಿಗಳು ಪಾಲಿನಲ್ಲಿ ಬಂದಿವೆ ಎಂಬುದು ಗೊತ್ತಿಲ್ಲ. ಹುಸೇನಪ್ಪ ಮತ್ತು ಪಕೀರಪ್ಪನ ಮಧ್ಯೆ ಯಾವಾಗ ವಿಭಾಗ ಆಗಿದೆ ಎಂಬುದು ಗೊತ್ತಿಲ್ಲ, ಏಕೆಂದರೆ ಬಹಳ ದಿನಗಳಾಗಿವೆ. ಯಾರ ಸಮಕ್ಷಮ ಸದರಿ ವಿಭಾಗ ಆಗಿದೆ ಎಂದು ಗೊತ್ತಿಲ್ಲ.

1 ನೇ ಪ್ರತಿವಾದಿಯ ಅಣ್ಣನಾದ ಮಲ್ಲಣ್ಣ ಪಾರ್ಶ್ವವಾಯು ರೋಗದಿಂದ ಬಳಲುತ್ತಿದ್ದ ಎಂದರೆ ಸರಿ. ಸದರಿ ಮಲ್ಲಣ್ಣನ ಆಸ್ಪತ್ರೆಯ ಚಿಕಿತ್ಸೆಗಾಗಿ 1 ನೇ ಪ್ರತಿವಾದಿ ಸಾಲ ಮಾಡಿದ್ದಳು ಎಂದರೆ ಸರಿಯಲ್ಲ. ಮಲ್ಲಣ್ಣನಿಗೆ ಪಾರ್ಶ್ವವಾಯು ರೋಗ ಬಂದಾಗ, 1 ನೇ ಪ್ರತಿವಾದಿ ಮಾತ್ರ

ನೋಡಿಕೊಂಡಿದ್ದಾಳೆ ಎಂದರೆ ಸರಿಯಲ್ಲ ನಮ್ಮ ತಾಯಿ ಕೂಡ ನೋಡಿಕೊಂಡಿದ್ದಾಳೆ. ನಮ್ಮ ತಾಯಿ ಮಲ್ಲಣ್ಣನಿಗೆ ಪಾರ್ಶ್ವವಾಯು ಆದಾಗ ಕವಿತಾಳದಲ್ಲಿದ್ದಳು ಎಂದರೆ ಸರಿ. ಆರಾಮ ಇಲ್ಲದಾಗ ಮಲ್ಲಣ್ಣನಿಗೆ ನಮ್ಮ ತಾಯಿ ಕೂಡ ಹೋಗಿ ನೋಡುತ್ತಿದ್ದಳು.

1 ನೇ ಪ್ರತಿವಾದಿ ತನ್ನ ಕುಟುಂಬದ ಪಾಲನೆಯ ಅವಶ್ಯಕತೆಗಾಗಿ ದಾವಾ ಸರ್ವೆ ನ.7 ರಲ್ಲಿರುವ 2 ಎಕರೆ ಜಮೀನನ್ನು 7 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಪ್ರತಿವಾದಿಯರಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ತಾಯಿಯ ಕಾಲಿಗೆ ಊನ ಆಗಿರುವುದರಿಂದ ಆಕೆ ನಡೆದಾಡಲು ಬರುವುದಿಲ್ಲ ಹೀಗಾಗಿ ನನಗೆ ಜಿ.ಪಿ.ಎ. ಕೊಟ್ಟಿರುತ್ತಾರೆ. ನಮ್ಮ ತಾಯಿಗೆ ಪ್ರತಿವಾದಿಯರ ವಿರುದ್ಧ ದಾವೆ ಸಲ್ಲಿಸಿ, ಪಾಲು ಪಡೆಯಬೇಕೆಂಬ ಯಾವುದೇ ಉದ್ದೇಶ ಇಲ್ಲದೆ ಇದ್ದರು ನಮ್ಮ ತಾಯಿಗೆ ಒತ್ತಾಯ ಮಾಡಿ ನಾನೇ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಶಪಥ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾನವಿ.